**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.</u>**

***<u>ಸಿ.ಸಿ. ನಂ.607/2024</u>***

***<u>ಪಿರ್ಯಾಧಿದಾರರುಃ</u>*** ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿಯಮಿತ, ಕೊಪ್ಪ, ಕೊಪ್ಪ ಅಂಚೆ ಮತ್ತು ತಾಲ್ಲೂಕು, ಪ್ರತಿನಿಧಿಸಿದವರುಃ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ವಿವೇಕಾನಂದ ಬಿನ್ ಸುಬ್ಬ ರಾವ್, 56 ವರ್ಷ, ವಾಸ ಕೆಸವೆ ಗ್ರಾಮ, ಕೊಪ್ಪ ತಾಲ್ಲೂಕು.

**ವಿರುದ್ಧ**

***<u>ಆರೋಪಿಃ</u>*** ಶ್ರೀ ಡಿ.ಎನ್. ದಿನೇಶ ಬಿನ್ ನಾಗಪ್ಪ ಗೌಡ, ದ್ಯಾಯಂಬಳ್ಳಿ ಗ್ರಾಮ ಮತ್ತು ಅಂಚೆ, ಕೊಪ್ಪ ತಾಲ್ಲೂಕು.

- - -

**<u>ಆಪಾದನೆ</u>**

ಆರೋಪಿಯಾದ ನೀವು ನಿಮ್ಮ ಅವಶ್ಯಕತೆಗಾಗಿ ಪಿರ್ಯಾಧಿದಾರರ ಸಹಕಾರ ಸಂಘದಿಂದ ಪಡೆದ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ರೂ.1,35,907/-ಗಳ ಬಾಬ್ತು 488425 ರ ಸಂಖ್ಯೆಯುಳ್ಳ 29.01.2024 ದಿನಾಂಕವನ್ನು ನಮೂದಿಸಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಜಯಪುರ ಶಾಖೆಯ ಒಂದು ಚೆಕ್ಕನ್ನು ಅವರಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾಧಿದಾರರು ಸ್ಟೇಟ್ ಬ್ಯಾಂಕ್ ಅಪ್ ಇಂಡಿಯಾ, ಕೊಪ್ಪ ಶಾಖೆಗೆ ಹಾಜರುಪಸಿದಾಗ ನಿಮ್ಮ**"ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ''** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 14.02.2024 ರಂತೆ ವಕೀಲರ ನೋಟೀಸು ನೀಡಿದ್ದು, ದಿನಾಂಕ 19.02.2024 ರಂದು ನೋಟೀಸು ನಿಮಗೆ ಜಾರಿಯಾಗಿದಾಗ್ಯೂ ಸಹ ನೀವು ಸದರಿ ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ದಿನಾಂಕ 13.08.2025.

ಸಹಿ/- 13.08.2025.<br>
(ನಂದಿನಿ ಎಂ.ಎನ್.)<br>
ಸಿವಿಲ್ ನ್ಯಾಯಾಧೀಶರು ಮತ್ತು<br>
ಪ್ರದನ್ಯಾದಂಃ ಕೊಪ್ಪ.